ನಕ್ಷತ್ರಪಟ

# ಸಂಬಳ



**ಟಿ.ಎಸ್. ನಾಗರಾಜ ಶೆಟ್ಟಿ**

ಕಲೆ: ಸಂತೋಷ್ ಸಸಿಹಿತ್ಲು

ರಂಗಣ್ಣನವರು ರಂಗಾಪುರದ ಹಿರಿಯರು. ಆ ಊರಿನ ಪಂಚಾಯಿತಿಯ ಚೇರ್ಮನ್ನರೂ ಆಗಿದ್ದಾರೆ. ಎಕರೆಗಟ್ಟಲೆ ಹೊಲಗದ್ದೆಗಳಿವೆ. ಜಮೀನು ಸಾಕಷ್ಟು ಇರುವುದರಿಂದ ಅವರನ್ನು ಜಮೀನ್ದಾರರು ಎಂದೇ ಕರೆಯುತ್ತಾರೆ. ಹೊಲದಲ್ಲಿ ಕಡಲೇಕಾಯಿಯನ್ನು, ಗದ್ದೆಯಲ್ಲಿ ಭತ್ತವನ್ನು ಬೆಳೆಯುತ್ತಾರೆ. ಗದ್ದೆಯ ಬಳಿಯ ಬಾವಿಯ ತುಂಬಾ ನೀರಿದೆ. ಅದನ್ನು ಗದ್ದೆಗೆ ಹಾಯಿಸಲು, ಪೈರನ್ನು ನಾಟಿ ಮಾಡಲು, ಉಳುಮೆ ಮಾಡಲು, ಮನೆಕೆಲಸಕ್ಕಾಗಿ ತುಂಬಾ ಜನ ಆಳು-ಕಾಳುಗಳಿದ್ದಾರೆ.

ಸೋಮನಾಥ ಹಿರಿಯಾಳು. ಅವನನ್ನು ಎಲ್ಲರೂ ಸೋಮಣ್ಣ ಎಂದೇ ಕರೆಯುತ್ತಾರೆ. ರಂಗಣ್ಣನವರು ಸೋಮಣ್ಣನನ್ನು ಕರೆದು ಇಂತಿಂಥ ಕೆಲಸಗಳನ್ನು ಹೀಗೆ ಹೀಗೆ ಮಾಡಿಸು ಎಂದು ಅಪ್ಪಣೆ ಕೊಟ್ಟರೆ ಸಾಕು, ಆತನೇ ಮುಂದೆ ನಿಂತು ಎಲ್ಲ ಕೆಲಸಗಳನ್ನೂ ಮಾಡಿಸಿ ಮುಗಿಸುತ್ತಾನೆ. ಅದರಲ್ಲಿ ಆತ ಚಾಣಾಕ್ಷ.

ಮಾಯಣ್ಣ ಒಬ್ಬ ಆಳು. ಸ್ವಲ್ಪ ಸೋಮಾರಿಯೆಂದೇ ಹೇಳಬೇಕು. ಕೆಲಸ ಮಾಡಲ್ಲ ಎಂದೇನಲ್ಲ; ಸ್ವಲ್ಪ ನಿಧಾನ. ತೋರಿಕೆಯೇ ಹೆಚ್ಚು. ಮಾಡಿದ್ದು ಮೂರು ಕಾಸಿನ ಕೆಲಸವಾದರೂ ಆರು ಕಾಸಿನ ಕೆಲಸ ಮಾಡಿದಂತೆ ಕೊಚ್ಚಿಕೊಳ್ಳುತ್ತಾನೆ. ಎಲ್ಲ ಡಂಬಾಚಾರ, ಹೀಗಾಗಿ ಎಲ್ಲರೂ ಅವನನ್ನು ಮಾಯಕಾರ ಎಂದು ಕರೆಯುತ್ತಾರೆ.

ಒಮ್ಮೆ ಆತನಿಗೆ ಒಂದು ಸಂಶಯ ಮನಸ್ಸಿನಲ್ಲಿ ಮೊಳೆಯಿತು. ಅದೇನೆಂದರೆ, ತಾನು ಬೆಳ್ಳಂಬೆಳಗ್ಗೆಯೇ ಜಮೀನ್ದಾರರ ಮನೆಯ ಬಳಿಗೆ ಬರುತ್ತೇನೆ. ಕತ್ತಲು ಮುತ್ತಿದ ಮೇಲೆಯೇ ಮನೆಗೆ ಮರಳುವುದು. ಊಟ-ತಿಂಡಿ ಇಲ್ಲಿಯೇ ಆಗುತ್ತದೆ ಎನ್ನುವುದು ನಿಜ. ಅಮ್ಮನವರೂ ಬಹಳ ಕಕ್ಕುಲಾತಿಯಿಂದ ನೋಡಿಕೊಳ್ಳುತ್ತಾರೆ. ಸೋಮಣ್ಣ ಹೊತ್ತೇರಿದ ಮೇಲೇ ಬರುತ್ತಾನೆ. ಸಂಜೆಯೇ ಮನೆಗೆ ಹೊರಟುಬಿಡುತ್ತಾನೆ. ನಾವು ನಮಗೆ ಹೇಳಿರುವ ಕೆಲಸವನ್ನು ಮುಗಿಸಿಯೇ ತೆರಳಬೇಕು. ಆದರೂ ಆತನಿಗೆ ಹೆಚ್ಚು ಸಂಬಳ, ತನಗೆ ಮಾತ್ರ ಕಡಿಮೆ ಸಂಬಳ. ಇದು ಎಷ್ಟರಮಟ್ಟಿಗೆ ಸರಿ? ಇದು ತಾರತಮ್ಯ ಅಲ್ಲವೇ? ಮೊಳೆತ ಸಂಶಯ ಬೆಳೆಯಲಾರಂಭಿಸಿತು.

ಒಂದು ದಿನ ಧೈರ್ಯ ತಂದುಕೊಂಡು ಜಮೀನ್ದಾರರನ್ನು ಕೇಳಿಯೇಬಿಡಲು ಸಿದ್ಧನಾದ. ಅವರ ಮುಂದೆ ನಿಂತು ಕೈಕೈ ಹಿಸುಕಿಕೊಳ್ಳತೊಡಗಿದ. ಹಗ್ಗದ ಮಂಚದ ಮೇಲೆ ಕುಳಿತು ತಾಂಬೂಲ ಜಗಿಯುತ್ತಿದ್ದ ಅವರು ಇವನನ್ನು ನೋಡಿಯೇ ನೋಡಿದರು.

'ಏನೋ ಮಾಯಣ್ಣ, ಹೀಗೇಕೆ ಕೊಸರಾಡುತ್ತಿದ್ದೀಯ? ಅದೇನು ಕೇಳಬೇಕೋ ಕೇಳು' ಎಂದರು. ಅವನು ಬಾಯಿ ಬಿಟ್ಟ.

'ಬುದ್ಧೀ, ನಾನು ಸೋಮಣ್ಣ ಒಂದೇ ವಯಸ್ಸಿನವರು. ತಮ್ಮಲ್ಲಿ ಬಹಳ ಕಾಲದಿಂದ ದುಡಿಯುತ್ತಿದ್ದೇವೆ. ಆದರೆ ಸಂಬಳ ಕೊಡುವುದರಲ್ಲಿ ವ್ಯತ್ಯಾಸ ಕಾಣುತ್ತಿದೆ. ಆತನಿಗೆ ಮಾತ್ರ ಹೆಚ್ಚು ಸಂಬಳ ಕೊಡುತ್ತೀರಿ, ನನಗೆ ಕಡಿಮೆ. ಈ ಭೇದವೇಕೆ?'

ಈ ಮಾತನ್ನು ಕೇಳಿ ರಂಗಣ್ಣನವರು ಬಾಯಿ ಬಿಟ್ಟು ನಕ್ಕುಬಿಟ್ಟರು. 'ನಿನ್ನದು ಒಳ್ಳೇ ಅನುಮಾನ ಕಣಯ್ಯ. ಅಷ್ಟೇ ತಾನೇ? ಇನ್ನೇನಾದರೂ ಕೇಳುವುದು